ಇನ್ನಿಲ್ಲದಂತೆ ಪೀಡಿಸಿ ಅವೆಲ್ಲಾ ಈಗಾಗಲೆ ಪಕ್ಕದ ಕಾಡಿಗೆ ಗುಳೆ ಹೊರಟಾಗಿದೆ. ಈ ಚಿರತೆಯ ಉಪಟಳದಿಂದ ನೀನೇ ನಮ್ಮನ್ನು ಕಾಪಾಡಬೇಕು' ಎಂದಿತು.

ಆಗ ಹುಲಿರಾಣಿಯು, 'ಹೆದರದಿರು ಕಪಿನಾಯಕನೆ ಈಗಲೇ ಆ ದುಷ್ಟ ಚಿರತೆಗೆ ಬುದ್ಧಿ ಕಲಿಸುತ್ತೇನೆ. ತೋರು ಆ ಚಿರತೆ ಇರುವ ಜಾಗವನ್ನು' ಎಂದು ಕಪಿ ನಾಯಕನೊಡನೆ ಹೊರಟಿತು. ಅಲ್ಲೇ ಮರವೊಂದರ ಎತ್ತರದ ಕೊಂಬೆಯ ಮೇಲೆ ಕುಳಿತಿದ್ದ ಚಿರತೆಯು ಹುಲಿ ರಾಣಿಯ ಎಚ್ಚರಿಕೆಯ ಮಾತನ್ನು ಕೇಳುವುದಿರಲಿ ಕೆಳಗಿಳಿದು ಬರುವ ಸೌಜನ್ಯವನ್ನು ತೋರಲಿಲ್ಲ. ಅಷ್ಟೇ ಅಲ್ಲದೆ ದರ್ಪದಿಂದ, 'ತಾನು ಯಾರ ಪ್ರಭುತ್ವವನ್ನು ಮನ್ನಿಸುವುದಿಲ್ಲ, ನನಗೆ ಯಾವ ಕಟ್ಟುಪಾಡುಗಳು ಅನ್ವಯಿಸುವುದಿಲ್ಲ' ಎಂದು ಹುಲಿರಾಣಿಗೆ ಖಂಡತುಂಡವಾಗಿ ಹೇಳಿತು.



ಹುಲಿರಾಣಿಗೆ ಮುಖಭಂಗವಾಗಿ ಕಡು ಕೋಪದಿಂದ ಕುದಿಯುತ್ತ, ದುಷ್ಟ ಚಿರತೆಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದುಕೊಳ್ಳುತ್ತಾ ಕಪಿನಾಯಕನೊಡನೆ ತನ್ನ ಗುಹೆಯತ್ತ ಹೆಜ್ಜೆ ಹಾಕಿತು.

ತನ್ನ ಗುಹೆಯ ಮುಂದೆ ಎಲ್ಲಾ ಪ್ರಾಣಿಗಳ ಸಭೆ ಸೇರಿಸಿ ಇನ್ನು ಕೆಲವೇ ದಿನಗಳಲ್ಲಿ ದುಷ್ಟ ಚಿರತೆಯನ್ನು ನಾಶ ಮಾಡಲು ಒಂದು ವ್ಯೂಹ ರಚಿಸುತ್ತೇನೆ ಎಂದು ಅಭಯ ನೀಡಿತು. ಗರುಡನನ್ನು ಹತ್ತಿರಕ್ಕೆ ಕರೆದು, 'ನೀನು ಆ ದುರುಳ ಚಿರತೆಯ ಬಗ್ಗೆ ನಿಗಾ ವಹಿಸಿ ನನಗೆ ಹೇಳಬೇಕು' ಎಂದಿತು. ಚಿಂತಿಸದಿರು ರಾಜಮಾತೆಯೇ ಈಗಾಗಲೇ ಆ ಚಿರತೆಯ ಎಲ್ಲಾ ಚಲನವಲನಗಳ ಮಾಹಿತಿ ನನ್ನ ಬಳಿ ಇದೆ. ತಿಂಗಳ ಪ್ರತಿ ಅಮಾವಾಸ್ಯೆಯಂದು ಆ ಚಿರತೆಯು ಕಾಡಿನಂಚಿನ ಹಳ್ಳಿಯ, ಕುರಿದೊಡ್ಡಿಗೆ ನುಗ್ಗಿ ಹತ್ತಾರು ಕುರಿಗಳನ್ನು, ಒಂದೆರಡು ಶ್ವಾನಗಳನ್ನು ಕೊಂದುಬರುತ್ತದೆ. ತಿನ್ನುವುದು ಒಂದು ಪಟ್ಟಾದರೆ ಕೊಲ್ಲುವುದು ಹತ್ತು ಪಟ್ಟು ಎಂದಿತು ಗರುಡ.

ಹುಲಿರಾಣಿಯು ಮಾರನೇ ದಿನ ಬೆಳಗ್ಗೆ ಪಕ್ಕದ ಹಳ್ಳಿಯ ಶ್ವಾನ ಮುಖಂಡನನ್ನು ಕರೆಸಿ, 'ಎಲೇ ಶ್ವಾನವೆ ಮೊನ್ನೆ ಮೊನ್ನೆ ಪಕ್ಕದ ಕಾಡಿಂದ ಬಂದು ನಮ್ಮ ಕಾಡಲ್ಲಿ ಬೀಡುಬಿಟ್ಟಿರುವ ಉಪದ್ರವಿ ಚಿರತೆಯೊಂದು ನಿಮ್ಮ ಹಳ್ಳಿಯಲ್ಲಿಯೂ ಕೂಡ ದಾಂದಲೆ ನಡೆಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಚಿರತೆಯನ್ನು ಹಣಿಯಲು ನಾನೊಂದು ವ್ಯೂಹ ರಚಿಸಿದ್ದೇನೆ. ಅದರ ವಿವರವನ್ನು ನಮ್ಮ ಕಪಿ ನಾಯಕನಿಗೆ ತಿಳಿಸಿದ್ದೇನೆ. ಅದರಂತೆ ನಡೆದು ಚಿರತೆಯನ್ನು ಹೆಡೆಮುರಿ ಕಟ್ಟಿ' ಎಂದಿತು.

ಮಾರನೆ ಅಮಾವಾಸ್ಯೆಯ ಮಧ್ಯರಾತ್ರಿ ಚಿರತೆಯು ಕಳ್ಳಹೆಜ್ಜೆ ಹಾಕುತ್ತಾ ಕುರಿದೊಡ್ಡಿಗೆ ಬಂದಿತ್ತು. ಸುಮಾರು ನೂರು ಹೆಜ್ಜೆಯಷ್ಟು ಉದ್ದನೆಯ ಓಣಿಯಂತಿರುವ ದೊಡ್ಡಿ, ಒಂದು ತುದಿಗೆ ಬಾಗಿಲು, ಇನ್ನೊಂದು ತುದಿಗೆ ಸುಮಾರು ಇಪ್ಪತ್ತು ಕುರಿಗಳ ಮಂದೆ, ನಡುವಿನ ವಿಶಾಲ ಅಂತರದ ಮೇಲೆ ಒಂದು ಎತ್ತರದ ಅಟ್ಟಣಿಗೆ. ಅದಾಗಲೇ ಅಟ್ಟಣಿಗೆಯ ಮೇಲೆ ಏಳೆಂಟು ಕಪಿ ಬಂಟರು ಮೀನಿನ ಬಲೆಗಳ ಸುರುಳಿಯನ್ನು ಬಿಚ್ಚಿ ಹರಡಿ ಕಾದುಕುಳಿತಿದ್ದವು. ಅಟ್ಟಣಿಗೆಯ ಕೆಳಗೆ ಚಿರತೆ ಹಾದು ಹೋಗುವುದನ್ನೇ ಕಾಯುತ್ತಿದ್ದ ಕಪಿಗಳು, ಚಿರತೆಯು ಕೆಳಗೆ ಹಾಯುತ್ತಿದ್ದಂತೆ ಒಮ್ಮೆಗೆ ಹರಡಿದ್ದ ನಾಲ್ಕೈದು ಬಲೆಗಳನ್ನು ಅಟ್ಟಣಿಗೆಯ ಮೇಲಿಂದ ಚಿರತೆಯ ಮೇಲೆ ಎಸೆದು ಮಿಸುಕಾಡದಂತೆ ಮಾಡಿದ್ದವು. ಕೂಡಲೆ ಹಳ್ಳಿಯ ಎಲ್ಲಾ ಶ್ವಾನಗಳು ಬಲೆಯಲ್ಲಿ ಸಿಕ್ಕಿಬಿದ್ದ ಚಿರತೆಯನ್ನು ಸುತ್ತುವರಿದು ಬೊಗಳತೊಡಗಿದವು. ಈ ಎಲ್ಲಾ ಗದ್ದಲದಿಂದ ಎಚ್ಚೆತ್ತ ಗ್ರಾಮಸ್ಥರು ಬಡಿಗೆಗಳನ್ನು ಹಿಡಿದು ಬಂದು ಕುರಿದೊಡ್ಡಿಯಲ್ಲಿನ ಪರಿಸ್ಥಿತಿಯನ್ನು ನೋಡಿ ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದ್ದರು. ಅರಣ್ಯ ಇಲಾಖೆಯವರು ಬಂದು ಬಲೆಯಲ್ಲಿ ಸಿಕ್ಕಿಬಿದ್ದ ಚಿರತೆಯನ್ನು ಮೃಗಾಲಯಕ್ಕೆ ಒಪ್ಪಿಸಿದರು.

ತನ್ನ ತಂತ್ರಗಾರಿಕೆಯಿಂದ ದುಷ್ಟ ಚಿರತೆಯ ಉಪಟಳವನ್ನು ನಿವಾರಿಸಿ ಕೊಟ್ಟ ಹುಲಿರಾಣಿಗೆ ಕೃತಜ್ಞತೆ ಹೇಳಿ ಅಂದಿನಿಂದ ಎಲ್ಲಾ ಪ್ರಾಣಿಗಳು ಸಂತೋಷವಾಗಿ ಜೀವಿಸತೊಡಗಿದವು. ●